**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

<u>ಸಿ.ಸಿ.ನಂ. **1081 /2025**</u>

ದಿನಾಂಕಃ **09.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಗೋವಿಂದಸ್ವಾಮಿ | ಚಾಸಾ-5, ಪ್ರಾಸ.-5 |
| ತಂದೆಯ ಹೆಸರುಃ | ಧಾನಪ್ಪ | |
| ವಯಸ್ಸು ಃ | 31 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಗಾಳಿಹಳ್ಳಿ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಚಾಸಾ-1 ಮತ್ತು 4 ರವರು ನನಗೆ ಗೊತ್ತು. ಡಿಸೆಂಬರ್ 2024 ರಲ್ಲಿ ಮೃತ ಬಸವರಾಜಪ್ಪ ರವರಿಗೆ ಅಪಘಾತವಾದ ವಿಚಾರಕ್ಕೆ ಸಂಬಂಧಿಸಿದಂತೆ ಅಜ್ಜಂಪುರ - ಬೀರೂರು ರಸ್ತೆಯಲ್ಲಿರುವ ಹಳ್ಳಿ ಮೇಸ್ತ್ರಿ ಗೋಡೌನ್ ಬಳಿ ಮಹಜರ್ ಜರುಗಿಸಿರುತ್ತಾರೆ. ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ-4 ರವರ ಸಮಕ್ಷಮದಲ್ಲಿ ಮಧ್ಯಾಹ್ನ 1.00 ರಿಂದ 2.00 ರವರೆಗೆ ಸ್ಥಳ ಮಹಜರ್ ಜರುಗಿಸಿ ಛಾಯಾಚಿತ್ರ ತೆಗೆಸಿರುತ್ತಾರೆ. ಮಹಜರ್ ಗೆ ನಾನು ಮತ್ತು ಚಾಸಾ-1 ಮತ್ತು 4 ರವರು ಸಹಿ ಮಾಡಿರುತ್ತೇವೆ. ಸಾಕ್ಷಿ ನಿಪಿ-2 ರ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ಸಮಯದಲ್ಲಿ ತೆಗೆಯಲಾದ ನಿಪಿ-3 ರಿಂದ 8 ರ ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಂತರ ಬೀರೂರು ಪೋಲಿಸ್ ವಸತಿಗೃಹದ ಬಳಿ ಅಮಾನತ್ ಮಹಜರ್ ಜರುಗಿಸಿ ಛಾಯಾಚಿತ್ರ ತೆಗೆಸಿರುತ್ತಾರೆ. ಚಾಸಾ-1 ರವರು ತೋರಿಸಿದ ಕೆಎಲ್-32 ಹೆಚ್-3001 ಕಾರನ್ನು ಮತ್ತು ಟಿ ವಿ ಎಸ್ ಎಕ್ಸ್ ಎಲ್ ವಾಹನವನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಮಹಜರನ್ನು ಮಧ್ಯಾಹ್ನ 2.30 ರಿಂದ 3.30 ರವರೆಗೆ ಜರುಗಿಸಿರುತ್ತಾರೆ. ಸಾಕ್ಷಿಯು ನಿಪಿ-9 ರ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು. ಅಪಘಾತವಾದ ಬಳಿ ನನ್ನ ಜಮೀನು ಇದ್ದ ಕಾರಣ ನಾನು ಮಹಜರ್ ಗೆ ಹೋಗಿರುತ್ತೇನೆ. ಅಮಾನತ್ ಮಹಜರ್ ಸಮಯದಲ್ಲಿ ತೆಗೆಯಲಾದ ನಿಪಿ-10 ರಿಂದ 15 ರ ಛಾಯಾಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>

ದಿಃ05.12.2024 ರಂದು ಅಪಘಾತವಾದ ವಿಚಾರವಾಗಿ ದಿಃ 09.12.2024 ರಂದು ಸ್ಥಳ ಮಹಜರ್ ಮತ್ತು ಅಮಾನತ್ ಮಹಜರ್ ಜರುಗಿಸಲು ನನಗೆ ಮತ್ತು ಚಾಸಾ-4 ರವರೆಗೆ ನೋಟಿಸು ಜಾರಿ ಮಾಡಿ ಕರೆಸಿರುತ್ತಾರೆ ಎಂದರೆ ಸರಿ. ಮಧ್ಯಾಹ್ನ 1.00 ರಿಂದ 2.00 ರವರೆಗೆ ಮಹಜರ್ ಜರುಗಿಸಿರುತ್ತಾರೆ ಎಂದರೆ

ಸರಿ. ಅಪಘಾತಕ್ಕೊಳಗಾದ ಟಿ ವಿ ಎಸ್ ವಾಹನದ ಸಂಖ್ಯೆ ಕೆಎ-66 ಕೆ-8675 ವಾಹನ ಮತ್ತು ಕಾರನ್ನು ಮಧ್ಯಾಹ್ನ 2.15 ರಿಂದ 3.00 ರವರೆಗೆ ಅಮಾನತ್ ಮಹಜರ್ ಜರುಗಿಸಿ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

ಪಾಟೀಸವಾಲುಃ ಶ್ರೀ ಎನ್ ಎಸ್ ಆರೋಪಿ ಪರ ವಕೀಲರಿಂದಃ

ಪ್ರಶ್ನೆಃ ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಅಪಘಾತವಾದ ಸ್ಥಳದಲ್ಲಿ ನನ್ನ ಜಮೀನು ಇದ್ದ ಕಾರಣ ನಾನೇ ಸ್ವತಃ ಮಹಜರ್ ಗೆ ಹೋಗಿರುತ್ತೇನೆ ಎಂದು ಹೇಳಿರುವುದು ಸರಿಯೋ ಅಥವಾ ಪೋಲಿಸರು ಜಾರಿ ಮಾಡಿದ ಮೇರೆಗೆ ನಾನು ಹೋಗಿರುತ್ತೇನೆ ಎಂದು ಹೇಳಿರುವುದು ಸರಿಯೋ ?

ಉತ್ತರ ಃ ನಾನು ಜಮೀನಿನಲ್ಲಿದ್ದು ನಾನೇ ಸ್ವತಃ ಹೋಗಿರುತ್ತೇನೆ. ಪೋಲಿಸರು ನನಗೆ ನೋಟಿಸು ನೀಡಿರುವುದಿಲ್ಲ.

ಅಪಘಾತವಾದ ದಿನ ಯಾವುದೇ ಬರವಣಿಗೆ ಸ್ಥಳದಲ್ಲಿ ಮಾಡಿರುವುದಿಲ್ಲ. ಅಪಘಾತವಾದ ಒಂದು ವಾರ ಅಥವಾ 15 ದಿನಗಳ ನಂತರ ಮಹಜರ್ ಜರುಗಿಸಿರುತ್ತಾರೆ. ನಾನು ಮತ್ತು ಚಾಸಾ-4 ರವರು ಒಟ್ಟಿಗೆ ಸಹಿ ಮಾಡಿರುವುದಿಲ್ಲ ಪ್ರತ್ಯೇಕವಾಗಿ ಸಹಿ ಮಾಡಿರತ್ತೇವೆ. ಸ್ಥಳಕ್ಕೆ ಹೋದಾಗ ಅಲ್ಲಿ ಯಾವುದೇ ವಾಹನ ಇರಲಿಲ್ಲ. ಅಪಘಾತವಾದ ದಿನ ಯಾವುದೇ ಸಹಿ ಮಾಡಿರುವುದಿಲ್ಲ. ಚಾಸಾ-1 ರವರ ಪರಿಚಯ ನನಗೆ ಇರುತ್ತದೆ. ನನ್ನ ಸಮಕ್ಷಮ ಪೋಲಿಸರು ಯಾವುದೇ ನಕ್ಷೆ ಮಾಡಿರುವುದಿಲ್ಲ. ಮಹಜರ್ ನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಆ ಕಾರಣ ನನಗೆ ಬರೆದಿರುವ ವಿಚಾರ ಗೊತ್ತಿಲ್ಲ ಎಂದರೆ ಸರಿ. ವಾಹನಗಳು ಪೋಲಿಸ್ ವಸತಿಗೃಹದ ಮುಂಭಾಗ ಇದ್ದವು. ಅಪಘಾತವಾದ ಟಿ ವಿ ಎಸ್ ವಾಹನದ ಮುಂಭಾಗ ಜಖಂ ಆಗಿತ್ತು ಎಂದರೆ ಸರಿ. ವಾಹನದ ಮುಂಭಾಗಕ್ಕೆ ಡಿಕ್ಕಿಪಡಿಸಿದರೆ ನಿಡಿ-1 ರಲ್ಲಿ ಕಂಡುಬರುವಂತೆ ವಾಹನ ಜಖಂ ಗೊಳ್ಳುತ್ತದೆ ಎಂದರೆ ಸಾಕ್ಷಿ ವಾಹನದ ಹಿಂಭಾಗದಿಂದ ಗುದ್ದಿದರೂ ಆ ರೀತಿ ಜಖಂ ಆಗುತ್ತದೆ ಎಂದು ನುಡಿಯುತ್ತಾರೆ. ನಾನು ಒಟ್ಟು 3 ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಸದರಿ ಸಹಿ ಮಾಡುವ ಸಮಯದಲ್ಲಿ ಚಾಸಾ-4 ನನ್ನ ಜೊತೆ ಇರಲಿಲ್ಲ ಎಂದರೆ ಸರಿ. ಮಹಜರ್ ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲದಿದ್ದರೂ ಚಾಸಾ-1 ರವರಿಗೆ ಪರಿಹಾರ ದೊರಕಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ರ ಮಹಜರ್ ನ ಚಕ್ಕುಬಂಧಿ ನನಗೆ ಗೊತ್ತಿಲ್ಲ ಆದರೆ ಪೂರ್ವ ದಿಕ್ಕಿನಲ್ಲಿ ಹಳ್ಳಿ ಮೇಸ್ಟ್ರು ಗೋಡೌನ್ ಇರುತ್ತದೆ. ಪಶ್ಚಿಮಕ್ಕೆ ಃ ನಂಜುಂಡಪ್ಪ ರವರ ಜಮೀನು ಇರುತ್ತದೆ. ನಿಪಿ-9 ರ ಮಹಜರ್ ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಸಮಯದಲ್ಲಿ ಯಾವುದೇ ಮಹಜರ್ ಜರುಗಿಸಿ ವಾಹನಗಳನ್ನು ಅಮಾನತ್ತುಪಡಿಸಿಕೊಳ್ಳದೇ ಇದ್ದರೂ ಚಾಸಾ-1 ರವರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-

**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಃದಃನ್ಯಾಃದಂ.,ರವರು, ಕಡೂರು.